**ಸಾಕ್ಷಿಯನ್ನು ದಿನಾಂಕ 01-12-2025 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ - ಶ್ರೀ ಟಿ ಕೆ ಎಂ ವಕೀಲರಿಂದಃ**

ಅಕ್ಕಿರಾಂಪುರ ಗ್ರಾಮದ ಸರ್ವೆ ನಂ **42/14** ನ್ನು ನಾನು ನೋಡಿರುವುದಿಲ್ಲ. ಸದರಿ ಸರ್ವೆ ನಂಬರ್ ಒಟ್ಟು **1** ಎಕರೆ **12** ಗುಂಟೆ ವಿಸ್ತಿರ್ಣ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ಸರ್ಕಾರದವರು ಜನತಾಕಾಲೋನಿಗಾಗಿ ಭೂಸ್ವಾಧೀನಪಡಿಸಿಕೊಂಡಿದ್ದಾರೆ ಎಂದರೆ ಸರಿ. ಸದರಿ ಜಮೀನನ್ನು ನಿವೇಶನಗಳನ್ನಾಗಿ ಮಾಡಿ ಹಂಚಿಕೆ ಮಾಡಿದ್ದು, ಈಗ ಸದರಿ ನಿವೇಶನಗಳಲ್ಲಿ ಮನೆಗಳನ್ನು ಕಟ್ಟಿದ್ದಾರೆ ಎಂದರೆ ಸರಿ. ಸರ್ವೆ ನಂ **42/14** ಗ್ರಾಮಠಾಣದ ಜಾಗ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ **42/14** ರಲ್ಲಿ ಪ್ರತಿವಾದಿಗಳು ಹುಲ್ಲು ಬಣವೆ ಹಾಕಿಕೊಂಡು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಪ್ರತಿವಾದಿಗಳು ನನ್ನ ಸಂಬಂಧಿಕರಾಗಿದ್ದು ನನ್ನ ಅನುಮತಿಯ ಮೇರೆಗೆ ಸದರಿ ಜಾಗದಲ್ಲಿ ಹುಲ್ಲು ಬಣವೆಯನ್ನು ಹಾಕಿಕೊಂಡಿರುತ್ತಾರೆ. ಪ್ರತಿವಾದಿಗಳು ಸದರಿ ಜಾಗದಲ್ಲಿ ಅವರ ತಂದೆಯ ಕಾಲದಿಂದಲೂ ಬಣವೆಯನ್ನು ಹಾಕಿಕೊಂಡು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ, ನನ್ನ ಅನುಮತಿಯ ಮೇರೆಗೆ ತಿಪ್ಪೆ ಮತ್ತು ಬಣವೆಯನ್ನು ಹಾಕಿಕೊಂಡು ಸ್ವಾಧೀನದಲ್ಲಿ ಇರುತ್ತಾರೆ.

**2.** ಪೂರ್ವಕ್ಕೆ ಸಯದ್ ಕಲೀಲ್ ರವರ ಮನೆ, ಪಶ್ಚಿಮಕ್ಕೆ ಹೊನ್ನದ್ದಯ್ಯರವರ ಜಮೀನು, ಉತ್ತರಕ್ಕೆ ಗ್ರಾಮ ಠಾಣಾ, ದಕ್ಷಿಣಕ್ಕೆ ರಸ್ತೆ ಮಧ್ಯದ ಚಕ್ಕುಬಂದಿ ಒಳಗೆ ಬರುವ ಜಾಗದಲ್ಲಿ ಪ್ರತಿವಾದಿಗಳು ಬಣವೆ ಮತ್ತು ತಿಪ್ಪೆಯನ್ನು ಹಾಕಿಕೊಂಡಿದ್ದಾರೆ ಎಂದರೆ ಸರಿಯಲ್ಲ, ಪಶ್ಚಿಮಕ್ಕೆ ನಮ್ಮ ಉಳಿಕೆ ಜಾಗ ಇರುತ್ತದೆ. ಪ್ರತಿವಾದಿಗಳು ಹುಲ್ಲು ಬಣವೆ ಮತ್ತು ತಿಪ್ಪೆ ಹಾಕಿಕೊಂಡಿರುವ ಜಾಗ **20 x40** ವಿಸ್ತೀರ್ಣ ಇರುತ್ತದೆ ಎಂದರೆ ಸರಿ. ಪೂರ್ವಕ್ಕೆ ಗರಡಿನರಸೀಯಪ್ಪನ ಮನೆ, ಪಶ್ಚಿಮಕ್ಕೆ ಹೊನ್ನಸಿದ್ದಯ್ಯನವರ ಜಮೀನು, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಜನತಾಕಾಲೋನಿ ಚಕ್ಕುಬಂದಿ ಒಳಗೆ **3** ನೇ ಪ್ರತಿವಾದಿ ಮನೆಯನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ, ದಕ್ಷಿಣಕ್ಕೆ ನಮ್ಮ ಉಳಿಕೆ ಜಾಗ ಇರುತ್ತದೆ ರಸ್ತೆ ಇರುವುದಿಲ್ಲ. **3** ನೇ ಪ್ರತಿವಾದಿ ಮನೆ ಕಟ್ಟಿರುವ ಜಾಗ **20 x40** ವಿಸ್ತೀರ್ಣ ಇರುತ್ತದೆ. ಪ್ರತಿವಾದಿಗಳು ಸ್ವಾಧೀನದಲ್ಲಿರುವ ಜಾಗಕ್ಕೂ ನಮಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಗ್ರಾಮ ಠಾಣಾ ಆದ ಸರ್ವೆ ನಂ **42/14** ರಲ್ಲಿ ಮನೆಯನ್ನು ಕಟ್ಟಿಕೊಂಡು ಹುಲ್ಲು ಬಣವೆ ಮತ್ತು ತಿಪ್ಪೆ ಹಾಕಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಜಾಗದಲ್ಲಿ ಸ್ವಾಧೀನದಲ್ಲಿ ಇರುತ್ತಾರೆ. ಸರ್ವೆ ನಂ **42/14** ರ ದಕ್ಷಿಣಕ್ಕೆ ಸಯದ್ ಕಲೀಲ್ ರವರ ಮನೆ ಬರುತ್ತದೆ ಎಂದರೆ ಸರಿ, ಅದರ ಸರ್ವೆ ನಂ **40/1A8** ಆಗಿರುತ್ತದೆ. ಕಲೀಲ್ ರವರು

ಸರ್ವೆ ನಂಬರ್ **42/14** ಗ್ರಾಮ ಠಾಣಾದಲ್ಲಿ ಮನೆಯನ್ನು ಕಟ್ಟಿದ್ದಾರೆ ಎಂದರೆ ಸರಿ, ಈಗ ಸದರಿ ಸರ್ವೆ ನಂಬರ್ ಈಗ ಪೋಡಾಗಿರುತ್ತದೆ. ಪ್ರತಿವಾದಿಗಳು ಸ್ವಾಧೀನದಲ್ಲಿರುವ ಜಾಗದಲ್ಲಿ ನಾನು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿ, ನನ್ನ ಅನುಮತಿ ಮೇರೆಗೆ ಅವರು ಸ್ವಾಧೀನದಲ್ಲಿ ಇರುತ್ತಾರೆ. ಸರ್ವೆ ನಂಬರ್ **40/1A8** ರಲ್ಲಿ ನಾನು ನಿವೇಶನ ಮಾಡಿರುವುದಿಲ್ಲ ಎಂದರೆ , ಆ ರೀತಿ ಮಾಡಲು ಹೋದಾಗ **2** ನೇ ಪ್ರತಿವಾದಿ ಅಡ್ಡಿಪಡಿಸಿರುತ್ತಾರೆ. ಪ್ರತಿವಾದಿಗಳಿಂದ ನನಗೆ ಸ್ವಾಧೀನ ಬಿಡಿಸಿಕೊಡುವಂತೆ ನಾನು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ ಎಂದರೆ ಸರಿ. ಪ್ರತಿವಾದಿಗಳು ಬಣವೆ ಮತ್ತು ತಿಪ್ಪೆಯನ್ನು ಖಾಲಿ ಮಾಡಿಸುವುದಿಲ್ಲ ಎಂದು ನಾನು ಪೊಲೀಸ್ ಠಾಣೆಯಲ್ಲಿ ಮುಚ್ಚಳಿಕೆಯನ್ನು ಬರೆದುಕೊಟ್ಟಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಗಳು ಸ್ವಾಧೀನ ಇರುವ ಜಾಗಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ.

**3.** ಸರ್ವೆ ನಂ **40/1A8** ಹದ್ದುಬಸ್ತು ಮಾಡಿಸಿರುತ್ತೇನೆ. ಸದರಿ ಸರ್ವೆ ನಂಬರನ್ನು ನಾನು ಸುಮಾರು **15** ವರ್ಷಕ್ಕಿಂದ ಮೊದಲು ಕ್ರಯಕ್ಕೆ ಪಡೆದಿರುತ್ತೇನೆ. ನಾನು ಕ್ರಯಕ್ಕೆ ಪಡೆಯುವ ಮೊದಲಿನಿಂದಲೂ ಪ್ರತಿವಾದಿಗಳು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಸರ್ವೆ ನಂ **42/14** ರ ಗ್ರಾಮ ಠಾಣಾ ಜಾಗ, ಪಶ್ಚಿಮಕ್ಕೆ ಹೊನ್ನಸಿದ್ದಯ್ಯರವರ ಜಮೀನು, ಉತ್ತರಕ್ಕೆ ಗ್ರಾಮ ಠಾಣಾ ಬರುತ್ತದೆ ಎಂದರೆ ಅಜೀಮಾಬಿ ರವರ ಜಮೀನಿನ ನಂತರ ಗ್ರಾಮ ಠಾಣಾ ಬರುತ್ತದೆ. ದಾವಾ ಆಸ್ತಿಯ ದಕ್ಷಿಣಕ್ಕೆ ರಸ್ತೆ ಬರುತ್ತದೆ ಎಂದರೆ ಸರಿಯಲ್ಲ, ನಮ್ಮದೇ ಉಳಿಕೆ ಜಾಗ ಬರುತ್ತದೆ. ದಾವಾ ಆಸ್ತಿಯ ಪೂರ್ವಕ್ಕಿರುವ ಗ್ರಾಮಠಾಣಾ ಜಾಗದಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ, ನನ್ನ ಜಾಗದಲ್ಲಿ ಸ್ವಾಧೀನದಲ್ಲಿ ಇರುತ್ತಾರೆ. ಸುಳ್ಳು ವ್ಯಾಜ್ಯ ಕಾರಣವನ್ನು ಸೃಷ್ಟಿ ಮಾಡಿಕೊಂಡು ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

ಓ.ಎಸ್. ನಂ. 68 /2018

PW-1-

Plaintiff present, filed his affidavit in lieu of chief examination and examined as PW-1 got marked Ex.P. 1 to 12.

Sri. DCS prays time.

Further chief of PW 1 by: 10-09-2025

Civil Judge and JMFC.
*Koratagere.*